ಶ್ರೀ ಎಂ.ಪಿ. ಪ್ರಕಾಶ್ : ಅವರು ನಮ್ಮ ಅಧ್ಯಕ್ಷರಾಗಿರಲಿಲ್ಲ. ಈಗ ಸಂಯುಕ್ತ ಜನತಾ ದಳ ಇರಲಿಲ್ಲ. ಅವರು ಸಮತಾ ಪಕ್ಷದ ಅಧ್ಯಕ್ಷರಾಗಿದ್ದರು.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮದು ಯಾರಿಗೂ ಅರ್ಥವಾಗದಂಥ ಪರಿಸ್ಥಿತಿಯಾಗಿದೆ. ನೀವು ಯಾರು , ಯಾವ ಯಾವ ಪಾರ್ಟಿ ಎಲ್ಲೆಲ್ಲಿ ಇರುತ್ತೀರಿ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಇದರ ಬಗ್ಗೆಯೇ ಒಂದು ಸಿ.ಬಿ.ಐ. ತನಿಖೆ ಮಾಡಬೇಕಾಗುತ್ತದೆ. ಇಲ್ಲಿ ಯಾವ ಯಾವ ಪಾರ್ಟಿಯಿಂದಲೋ ಬಂದವರನ್ನು ಸೇರಿಸಿಕೊಂಡು ನೀವು ಮಾತನಾಡುತ್ತಾ ಇಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಸದನದ ಸಮಿತಿ ಬಗ್ಗೆ ಮಾತ್ರ ಹೇಳಿ. ವಿಷಯ ಬೇರೆ ದಿಕ್ಕಿಗೆ ಹೋಗುತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಈಶ್ವರಪ್ಪನವರು ಪ್ರಸ್ತಾಪ ಮಾಡಿದ್ದರಿಂದ ಅದಕ್ಕೆ ನಾನು ಉತ್ತರವನ್ನು ಕೊಡಬೇಕಾಯಿತು. ಈಗ ಸದನದ ಸಮಿತಿಯಿಂದ ನಮಗೆ ಪರಿಹಾರ ದೊರಕುವುದಿಲ್ಲ. ಯಾವುದೇ ಪ್ರತಿಷ್ಠೆ ಮಾಡಬೇಕೆಂಬದೂ ನಮ್ಮ ಸರ್ಕಾರಕ್ಕೆ ಇಲ್ಲ. ತಾವೆಲ್ಲರೂ ಕೂಡ ಏನು ಹೇಳಿದ್ದೀರಿ, ಸದನದ ಸಮಿತಿ ಮಾಡತಕ್ಕಂಥ ಅವಶ್ಯಕತೆ ಯಾವಾಗ ಉದ್ಭವವಾಗುತ್ತಿತ್ತು? ನಮ್ಮ ತನಿಖೆ ಏನಿದೆ, ಸಿ.ಒ.ಡಿ ತನಿಖೆ ನಡೆಯತಕ್ಕಂಥಾದ್ದು ಸರಿಯಾದ ದಿಕ್ಕಿನಲ್ಲಿ ನಡೆಯುತ್ತಾ ಇಲ್ಲ, ಅಲ್ಲಿ ಭ್ರಷ್ಟರನ್ನು ಮುಚ್ಚಿಡುವಂಥ ಪ್ರಯತ್ನ ನಡೆಯುತ್ತಾ ಇದೆ ಎಂಬ ಮಾತನ್ನು ತಾವು ಹೇಳಿದ್ದರೆ, ಮತ್ತೊಂದು ಸಮಾನಾಂತರವಾಗಿರತಕ್ಕಂಥ ವಿಚಾರಣೆಯನ್ನು ನಾವು ಮಾಡಲು ಪ್ರಯತ್ನ ಮಾಡಬಹುದಾಗಿತ್ತು. ಆದರೆ, ತಾವೇ ಹೇಳಿದ್ದೀರಿ ಸಿ.ಒ.ಡಿ ತನಿಖೆ ಬಹಳ ಚೆನ್ನಾಗಿ ನಡೆಯುತ್ತಾ ಇದೆ, ಅಲ್ಲಿಯ ಅಧಿಕಾರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ಹೇಳಿದ್ದೀರಿ. ಈ ಹಿನ್ನೆಲೆಯಲ್ಲಿ ಸದನದ ಸಮಿತಿಯನ್ನು ಮಾಡಬೇಕಾದ ಅಗತ್ಯತೆ ಇಲ್ಲ. ಸಮಾನಾಂತರವಾಗಿರತಕ್ಕ ಮತ್ತೊಂದು ವಿಚಾರಯಿಂದ ನಿರೀಕ್ಷಿತ ಪ್ರತಿಫಲ ಬರುವುದಿಲ್ಲವೆನ್ನುವ ಕಾರಣಕ್ಕಾಗಿ ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಅದನ್ನು ಕೈಬಿಟ್ಟು ಸರ್ಕಾರದೊಂದಿಗೆ ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ನಾವು ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದೇ ಪ್ರಮುಖ ರಾಜಕಾರಣಗಳು ಇದರಲ್ಲಿ ಸಿಗದಂತೆ ಎಚ್ಚರ ವಹಿಸಬೇಕೆಂದು ಒತ್ತಾಯ ತರುವಂಥಾದ್ದು ಜಗಜ್ಜಾಹಿರಾಗಿರುವಂಥ ಸಂಗತಿ. ಇದುವರೆಗೆ ಯಾವುದೇ ಪ್ರಮುಖ, ಮಾಜಿ ಜಿಲ್ಲಾ ಸಚಿವರ ಹೆಸರನ್ನು ಅವರು ಹೇಳುವುದಕ್ಕಾಗಿಲ್ಲ. ರಾಜಕೀಯ ಪಕ್ಷದ ಮುಖಂಡರು ಯಾರು ಶಾಮೀಲಾಗಿದ್ದಾರೆ ಟಾಪ್ ಅಧಿಕಾರಿಗಳು ಇವರಿಗೆ ಸಿಕ್ಕಿಲ್ಲ. ಡೆಪ್ಯೂಟಿ ಕಮಿಷನರ್ ಆದಿಯಾಗಿ ಶಾಮೀಲಾಗಿರುವ ಉದಾಹರಣೆ ಇವೆ.

ಶ್ರೀ ವಾಟಾಳ್ ನಾಗರಾಜ್ : ಸದನದ ಸಮಿತಿಗೆ ಒತ್ತಾಯ ಮಾಡಿ, ನಮಗೆ ಧರಣಿ ಮಾಡುವುದೊಂದೇ ಉಳಿದಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಲೂಟಿ ಮಾಡಿ ಹೋಗುತ್ತಾ ಇದ್ದಾರೆಂಬ ಭಾವನೆ ಜನರಿಗೆ ಸ್ಪಷ್ಟವಾಗಿ ಇವತು ಗೊತ್ತಾಗುತ್ತಿದೆ. ಆದ್ದರಿಂದ, ಇದನ್ನು ಪ್ರತಿಭಟನೆ ಮಾಡಿ ಇವತ್ತು ಈ ಸರ್ಕಾರ ಸತ್ಯ ಮುಚ್ಚಿಟ್ಟು, ಭ್ರಷ್ಟರನ್ನು ಮುಚ್ಚಿಡುವುದಕ್ಕೆ ಹೋ, ರುವಂಥ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಅನಿವಾರ್ಯವಾಗಿ ಧರಣಿ ಕುಳಿತುಕೊಳ್ಳುತ್ತೇವೆ.

ಗೊಂದಲ

(ಪ್ರತಿ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಧರಣಿ ಮಾಡಲು ಸಭಾಧ್ಯಕ್ಷರ ಮುಂದಿನ ಅಂಗಳಕ್ಕೆ ಬರುತ್ತಿದ್ದರು)

ಗೊಂದಲ

ಅಧ್ಯಕ್ಷರು : ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯ ವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ ಐದು ಗಂಟೆ ಒಂದು ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ : 17-6-04ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)